# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು-572 103
ದೂರವಾಣಿ : 0816-2254546, 0816-2255596, 0816-2255597 ಫ್ಯಾಕ್ಸ್ : 0816-2270719

ಸಂಖ್ಯೆ:ತುವಿ:ಖ.ಕೋ:116:2025-26/ 958 ದಿನಾಂಕ:15.07.2025

## ದರಪಟ್ಟಿ ಆಹ್ವಾನ

ವಿಷಯ: ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಅಗತ್ಯ ಉಪಕರಣಗಳ ಸರಬರಾಜು ಪಡೆಯುವ ಸಂಬಂಧ ದರಪಟ್ಟಿಗಳನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖ: 1. ಕುಲಸಚಿವರು (ಪರೀಕ್ಷಾಂಗ), ಇವರ ಪತ್ರ ದಿನಾಂಕ: 03.07.2025
2. ವಿ.ವಿ ಅಧಿಸೂಚನೆ ಪತ್ರದ ಸಂಖ್ಯೆ: ತುವಿತು:ಕೆ.ಟಿ.ಪಿ.ಪಿ/ತಿ.ಪ/ಖ.ಕೋ/2022-23/3095 ದಿನಾಂಕ: 09.09.2022
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 11.07.2025

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01)ರ ಮನವಿ ಮೇರೆಗೆ ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಅಗತ್ಯ ಉಪಕರಣಗಳ ಸರಬರಾಜು ಪಡೆಯುವ ಸಂಬಂಧ ಉಲ್ಲೇಖ (02)ರ ವಿಶ್ವವಿದ್ಯಾನಿಲಯದ ಆದೇಶದಂತೆ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ಷರತ್ತುಗಳಿಗೊಳಪಟ್ಟು ಆಸಕ್ತ ನೊಂದಾಯಿತ ಸಂಸ್ಥೆಗಳಿಂದ ಉಲ್ಲೇಖ (03)ರ ಅನುಮೋದನೆ ಮೇರೆಗೆ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| Sl. No. | Particulars | Specifications | Rqd Qty | Rate to be quoted (Incl. of all taxes) |
|---|---|---|---|---|
| 01. | Desktop Computer System | All-in-One PC 13th Intel Core i5-27 inch(6 cm) FHD 16GB, 1TB SSD, Intel A Graphics, 710 te Wireless Board and mouse nbo, (Windows 11 ne, MSO 21, Shell te, 6.72kg) 27-107 in | 01 | |
| 02. | External hard disk | Se gate External Hard disk 4TB | 01 | |
| 03. | External hard disk | Se gate External Hard disk 2TB | 01 | |
| 04. | Printer | laser Jet Tank<br>• A4 Black and White Laser Multifunction Printer, Perfect for Business<br>• Print Copy, Scan, Duplex, ADF<br>• Print speed up to 21 ppm (black)<br>• USB, Ethernet networking | 01 | |
| 05. | Scanner | Scan Jet pro Sheet-Feed Scanner<br>• Sheetfed<br>• Up to 600 dpi<br>• Up to 40 ppm/80 ipm<br>• USB 3.0<br>• Recommended daily duty cycle: 4000 pages | 01 | |

**ಷರತ್ತು ಮತ್ತು ನಿಬಂಧನೆಗಳು:**

1. ಮುಚ್ಚಿದ ಲಕೋಟೆಯ ಮೇಲೆ "ಪರೀಕ್ಷಾ ವಿಭಾಗಕ್ಕೆ ಅಗತ್ಯ ಉಪಕರಣಗಳ ಸರಬರಾಜು ಕುರಿತ ದರಪಟ್ಟಿ" ಎಂದು ನಮೂದಿಸತಕ್ಕದ್ದು.
2. **ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ:23.07.2025 ಅಪರಾಹ್ನ 3.30 ಗಂಟೆ.**
3. ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು-572 103 ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
4. ತಮ್ಮ ದರಪಟ್ಟಿಯಲ್ಲಿ ಪ್ರತೀ ಸಾಮಗ್ರಿವಾರು ದರಗಳನ್ನು ನಮೂದಿಸುವುದು. (ಎಲ್ಲಾ ತೆರಿಗೆ ಮತ್ತು ಸರಬರಾಜು ವೆಚ್ಚ ಒಳಗೊಂಡಿರತಕ್ಕದ್ದು.)

5. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
6. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ಅಧಿಕೃತ ಮಾರಾಟಗಾರರು/ಸರಬರಾಜುದಾರರು/ತಯಾರಕರು ಆಗಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು.
7. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
8. ದರಪಟ್ಟಿಯಲ್ಲಿ ನಮೂದಿಸಿರುವ ಉಪಕರಣಗಳ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
9. **ದರಪಟ್ಟಿಯನ್ನು ಅಂಗೀಕರಿಸುವಾಗ ಸಂಸ್ಥೆಗಳು ಸಲ್ಲಿಸಿದ ದರಪಟ್ಟಿಗಳಲ್ಲಿನ ಉಪಕರಣವಾರು ಅತೀ ಕಡಿಮೆ ದರಗಳನ್ನು ವಿಶ್ವವಿದ್ಯಾನಿಲಯವು ಪರಿಗಣಿಸಲಾಗುವುದು.**
10. ತಮ್ಮ ಸಂಸ್ಥೆಯು ಸರಬರಾಜು ಮಾಡಲು ಉದ್ದೇಶಿಸಿರುವ ಉಪಕರಣಗಳ ಸಂರಚನೆಗಳಲ್ಲಿ ವ್ಯತ್ಯಾಸ ಇದ್ದರೆ ಸಂರಚನೆಗಳ ಮಾಹಿತಿ/ಮಾದರಿ ಸಂಖ್ಯೆಗಳನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
11. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
12. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
13. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ **ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸಬಹುದು.

ಆದೇಶದ ಮೇರೆಗೆ

ಉಪಕುಲಸಚಿವರು

**ಉಪಕುಲಸಚಿವರು**
**ಖರೀದಿ ಕೋಶ**
**ತುಮಕೂರು ವಿಶ್ವವಿದ್ಯಾನಿಲಯ**
**ತುಮಕೂರು**

ಪ್ರತಿಗಳು:

1. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
3. ಕಚೇರಿ ಪ್ರತಿ.